

# ಹದಿಹರೆಯದಲ್ಲಿ ಕಳ್ಳತನದ ಖುಷಿ

ಮೊಬೈಲ್‌ನಲ್ಲಿರುವ ಅಗಾಧ ಅವಕಾಶಗಳನ್ನು ಕಂಡು ಶಾಲಿನಿ ತಬ್ಬಿಬ್ಬಾಗಿದ್ದಳು. ಅವಳ ಸ್ನೇಹಿತೆಯರೆಲ್ಲ ತಮ್ಮ ಮಕ್ಕಳಿಗೆ ಅದಾಗಲೇ ಮೊಬೈಲ್ ಕೊಡಿಸಿದ್ದರು. ಪಕ್ಕದ ಮನೆಯ ನೀಲಿಮಾಳ ಮಗಳು ಮೊಬೈಲ್‌ನಲ್ಲಿ ಎರಡು ವಾಟ್ಸ್‌ಆ್ಯಪ್ ಅನ್ನು ನಿರ್ವಹಿಸುತ್ತಾಳೆ. ಒಂದು ಅಮ್ಮನಿಗೆ ಕಾಣುವ ಹಾಗೆ, ಮತ್ತೊಂದು ಅಮ್ಮನಿಗೆ ಕಾಣದಂತೆ. ಅಷ್ಟೇ ಏಕೆ, ಗ್ಯಾಲರಿಯಲ್ಲಿಯೂ ಹಿಡನ್ ಗ್ಯಾಲರಿಯನ್ನು ರೂಪಿಸಿಕೊಳ್ಳುವ ಜಾಣತನ ಕಲಿತಿದ್ದಾಳೆ. ನೀಲಿಮಾ ಮತ್ತು ಶಾಲಿನಿ ಆಗಾಗ ಈ ಕುರಿತು ವಿಚಾರ ಹಂಚಿಕೊಳ್ಳುತ್ತ ಆತಂಕಗೊಳ್ಳುತ್ತಾರೆ.

ಹಿಂದಿನ ಕಾಲ ಎಂದರೆ ಬಹಳ ಹಿಂದೇನೂ ಅಲ್ಲ, ಮೂರ್ನಾಲ್ಕು ದಶಕಗಳ ಹಿಂದೆಯೂ ಹದಿ ಹರೆಯ ಹೀಗೆಯೇ ಇತ್ತು. ಹದಿಹರೆಯದಲ್ಲಿ ಪ್ರೀತಿ ಪ್ರೇಮದ ಕಳ್ಳಭೇಟಿಗಳ ಜೊತೆಗೆ ಹೀರೋಗಿರಿ ಪ್ರದರ್ಶನ, ಸಾಹಸ ಕಾರ್ಯಗಳನ್ನು ಮಾಡುವ ಹುಕಿಯೂ ಹೆಚ್ಚಾಗಿಯೇ ಇರುತ್ತದೆ. ಆದರೆ ಆಗೆಲ್ಲ ಮಕ್ಕಳು ಅಪ್ಪ ಅಮ್ಮನ ನಿರೀಕ್ಷೆಯನ್ನೋ, ಅಂದಾಜನ್ನೋ ಮೀರುವ ಅವಕಾಶಗಳು ಕಡಿಮೆ ಇದ್ದವು. ಈಗ ತಂತ್ರಜ್ಞಾನದ ಉತ್ಕರ್ಷದ ದೆಸೆಯಿಂದಾಗಿ ಮಕ್ಕಳ ಕಿತಾಪತಿಗಳು ಪೋಷಕರಿಗೆ ಅರ್ಥವಾಗುವುದು ಬಹಳ ಕಷ್ಟವಾಗಿದೆ. ಇದು ಅವರ ಆತಂಕವನ್ನು ಇಮ್ಮಡಿಗೊಳಿಸಿದೆ.

ಮಕ್ಕಳಿಗೆ ನೀಡುವ ಶಿಕ್ಷಣದ ಮೂಲಭೂತ ಉದ್ದೇಶವೇ ಅವರಲ್ಲಿ ವಿವೇಕವನ್ನು ಜಾಗೃತಗೊಳಿಸುವುದು. ಸಮಾಜದಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದು, ನೇರ ದಾರಿಯಲ್ಲಿ ನಡೆಯುವುದು ಯಾಕೆ ಮುಖ್ಯ ಎಂಬ ಅಂಶಗಳನ್ನು ಮಕ್ಕಳು ಗಮನಿಸುತ್ತಲೇ ಇರುತ್ತಾರೆ. ಅಂತಹ ವಿವೇಕವನ್ನು ಜಾಗೃತಗೊಳಿಸಲು ಪೂರಕ ಆಗುವುದು ಸಿನಿಮಾ, ಪುಸ್ತಕ, ಕತೆಗಳು, ಸ್ಫೂರ್ತಿ ನೀಡುವ ಉಪನ್ಯಾಸಗಳು ಹಾಗೂ ಮನೆ–ಶಾಲೆಯಲ್ಲಿ ಕಲಿಯುವ ಮೌಲ್ಯಗಳು.

ಸಮಾಜಮುಖಿ ಕೆಲಸಗಳನ್ನು ಮಾಡಿದ ವ್ಯಕ್ತಿಗಳ ಪರಿಚಯವೊಂದು ಪತ್ರಿಕೆಯಲ್ಲಿ ಪ್ರಕಟವಾದಾಗ, ಟೀವಿಯಲ್ಲಿ ಜನಸ್ನೇಹಿ ಕಾರ್ಯಕ್ರಮದ ವಿವರಗಳನ್ನು ನೋಡಿದಾಗ, ಕತೆ ಪುಸ್ತಕವೊಂದನ್ನು ಓದುವಾಗ, ಹಾಡೊಂದನ್ನು ಗುಂಗು ಹಿಡಿಸಿಕೊಂಡು ಕೇಳಿದಾಗಲೆಲ್ಲ ಹಸಿಮಣ್ಣಿನಂತಹ ಅಂತರಂಗವು ತನ್ನ ಧೋರಣೆಯೊಂದನ್ನು ರೂಪಿಸಿಕೊಳ್ಳುತ್ತಲೇ ಇರುತ್ತದೆ. ಈ ರೂಪುಗೊಳ್ಳುವ ಪ್ರಕ್ರಿಯೆ ಬಹಳ ನಿಧಾನವಾದುದು.

ಮನೆಯಲ್ಲಿ, ಸಮಾಜದಲ್ಲಿ ನಡೆಯುವ ಜಗಳಗಳು, ತರ್ಕ ತಕರಾರುಗಳೂ ಈ ಪ್ರಕ್ರಿಯೆಯಲ್ಲಿ ಪಾತ್ರ ವಹಿಸುತ್ತವೆ. ಸಮಾಜದಲ್ಲಿ ಘಟನೆಯೊಂದು ನಡೆದಾಗ ಹದಿಹರೆಯದವರು ತಕ್ಷಣ ಪ್ರತಿಕ್ರಿಯಿಸುತ್ತಾರೆ. ಅಂತಹ ಪ್ರತಿಕ್ರಿಯೆಗಳೆಲ್ಲ ಸರಿಯೂ ಅಲ್ಲ, ಅವೆಲ್ಲ ತಪ್ಪೂ ಅಲ್ಲ. ಆದರೆ ಪ್ರತಿಕ್ರಿಯಿಸುವಷ್ಟು ಕ್ರಿಯಾಶೀಲರಾಗಿ ಅವರನ್ನು ರೂಪುಗೊಳಿಸುವ ಜವಾಬ್ದಾರಿ ಹಿರಿಯರದ್ದು. ಈ ಹಿನ್ನೆಲೆಯಲ್ಲಿ, ಪಠ್ಯೇತರ ಓದು, ಸಂಗೀತ, ನಾಟಕ, ಸಿನಿಮಾ ಕ್ಷೇತ್ರಗಳನ್ನು ಮಕ್ಕಳು ಇಷ್ಟಪಟ್ಟಾಗ ಅವರನ್ನು ನಿರುತ್ಸಾಹಗೊಳಿಸುವುದು ಸರಿಯಲ್ಲ.

ಪೋಷಕರು ಬಯಸುವ ವಿಚಾರಗಳನ್ನೇ ಮಕ್ಕಳು ಇಷ್ಟಪಡಬೇಕೆಂದಿಲ್ಲ. ಅವರ ಕಾಲಕ್ಕೆ, ಅವರು ಬದುಕುವ ಸ್ಥಿತಿಯಲ್ಲಿ ಯಾವುದು ಸರಿಯೆಂದು ಕಾಣುತ್ತದೋ ಅದನ್ನು ಅವರು ಮಾಡಬೇಕು, ಅಥವಾ ಕ್ರಿಯಾಶೀಲರಾಗಿರಬೇಕು ಎಂಬ ಜಾಗೃತಿ ಅವರಲ್ಲಿ ಮೂಡಿದರೆ ಸಾಕು. ಜೊತೆಗೆ ಯಾವುದೇ ನೀತಿ ನಿಯಮ, ವಿಚಾರಗಳೇ ಆಗಿರಲಿ, ಮಾನವೀಯತೆಗಿಂತ ಮಿಗಿಲು ಮತ್ತೊಂದಿಲ್ಲ ಎಂಬುದನ್ನು ಅವರು ನಂಬುವಂತೆ ಮಾಡಿದರೆ ಅಷ್ಟು ಸಾಕು. ಸರಿ ತಪ್ಪುಗಳ ನಡುವೆ ಒಂದಿಷ್ಟು ಓಲಾಡಿದರೂ, ಹದಿಹರೆಯ ದಾಟುವಷ್ಟರಲ್ಲಿ ಅವರು ತಮ್ಮದೇ ಅಭಿಪ್ರಾಯ ರೂಪಿಸಿಕೊಳ್ಳುವ ಸಮರ್ಥ ಪ್ರಜೆಗಳಾಗಿ ಬೆಳೆದುಬಿಡುತ್ತಾರೆ.

ತಂತ್ರಜ್ಞಾನವು ಇಂದು ಖಾಸಗಿತನದ ನೆಪದಲ್ಲಿ ಹಲವಾರು ಒಳ್ಳೆಯ ಮತ್ತು ಕೆಟ್ಟ ಅವಕಾಶಗಳನ್ನು ಸೃಷ್ಟಿ ಮಾಡಿದೆ ಎನ್ನುವುದನ್ನು ತಿಳಿಯದಷ್ಟು ಶಾಲಿನಿಯಾಗಲೀ ನೀಲಿಮಾ ಆಗಲೀ ಅಜ್ಞಾನಿಗಳೇನಲ್ಲ. ಆದರೆ, ತೋರಿಕೆಗೊಂದು ಇನ್‌ಸ್ಟಗ್ರಾಂ ಅಕೌಂಟ್ ಮತ್ತು ಚಾಟಿಂಗ್‌ಗೋಸ್ಕರ ಪ್ರತ್ಯೇಕ ಇನ್‌ಸ್ಟಾಗ್ರಾಂ ಅಕೌಂಟ್ ನಿಭಾಯಿಸುವ ಮಕ್ಕಳ ಚಾಕಚಕ್ಯತೆ ಅವರಿಗಿಲ್ಲ. ಹದಿಹರೆಯವನ್ನು ದಾಟುತ್ತಿದ್ದಂತೆಯೇ ಓದಿನಲ್ಲಿ ಮುಂದುವರೆಯುವ ಸ್ನೇಹಿತರ ಸಹವಾಸ, ಉನ್ನತ ಶಿಕ್ಷಣದ ಜವಾಬ್ದಾರಿ, ವೃತ್ತಿಯತ್ತ ಗಮನ ಹರಿಸುವ ಸ್ನೇಹಿತರ ಏಕಾಗ್ರತೆ ಎಲ್ಲವನ್ನೂ ಗಮನಿಸುತ್ತ ಮಕ್ಕಳು ನಿಧಾನವಾಗಿ ದೊಡ್ಡವರಾಗುತ್ತಾರೆ. ಈ ಕಳ್ಳತನದ ಅಕೌಂಟ್ ನಿಭಾಯಿಸುವುದರಲ್ಲಿ ಏನೂ ಅರ್ಥವಿಲ್ಲ ಎನ್ನುವ ಅರಿವು ಅವರಲ್ಲಿಯೂ ಮೂಡುತ್ತದೆ. ಮನೆಯವರು ತನ್ನನ್ನು ಎಷ್ಟೊಂದು ನಂಬುತ್ತಾರಲ್ಲ! ಎಂಬ ಅರಿವೇ ಅವರನ್ನು ಸರಿದಾರಿಗೆ ಬರಲು ಪ್ರೇರೇಪಿಸುತ್ತದೆ.

ಎಲ್ಲದಕ್ಕಿಂತ ಮುಖ್ಯವಾಗಿ ತಾವು ಮಾಡುತ್ತಿರುವ ಯಾವುದೋ ಚಾಟಿಂಗ್, ಕೆಲಸಗಳು ಈ ಸಮಾಜ ಮಾನ್ಯ ಮಾಡುವಂಥದ್ದಲ್ಲ, ಅಪ್ಪ ಅಮ್ಮನೂ ಮಾನ್ಯ ಮಾಡುವುದಿಲ್ಲ ಎಂಬ ಸಣ್ಣ ಅರಿವು ಇರುವುದರಿಂದಲೇ ಅವರು ಅಕೌಂಟ್‌ಗಳನ್ನು ಬಚ್ಚಿಡುತ್ತಾರಲ್ಲವೇ? ಆದ್ದರಿಂದ ಆ ದಾರಿಯಲ್ಲಿ ಅವರು ಎಡವದಂತೆ ಅಪ್ಪ ಅಮ್ಮ ಎಚ್ಚರ ವಹಿಸಿದರೆ ಸಾಕು. ಖಂಡಿತಾ ಅವರು ಒಳ್ಳೆಯತನದ ಗೆರೆ ದಾಟುವುದಿಲ್ಲ. ಒಳ್ಳೆಯ ವಾತಾವರಣವನ್ನೇ ಕಲ್ಪಿಸುವ ಪ್ರತಿಜ್ಞೆ, ಅಪ್ಪ ಅಮ್ಮನ ಬಳಿ ಇದ್ದಾಗ, ಹೆಚ್ಚಿನ ಯಡವಟ್ಟುಗಳು ಆಗುವುದಿಲ್ಲ.

ಸರಳವಾಗಿ ಹೇಳಬೇಕೆಂದರೆ ಕಳ್ಳ ಗ್ಯಾಲರಿಯನ್ನೋ ಕಳ್ಳ ಅಕೌಂಟನ್ನೋ ಮಕ್ಕಳು ಹೊಂದಿದ್ದರೆ ಅದು ಅಸಹಜವೇನಲ್ಲ. ಅಂಥ ದಾರಿಯಲ್ಲಿ ಪೋಷಕರು ನಡೆಯುವುದು ಅಸಹಜ.

■ **ಸ್ವಯಂಪ್ರಭಾ**